## ಅಧ್ಯಾಯ-೧೨
# ಪ್ರೇಕ್ಷಣೀಯ ಸ್ಥಳಗಳು

ಪಿರಿಯಾಪಟ್ಟಣ ತಾಲೂಕು ಅರೆ ಮಲೆನಾಡಾಗಿದ್ದು ಜನಸಂಖ್ಯಾ ಬಾಹುಳ್ಯದಿಂದ ಪ್ರಕೃತಿಸಂಪತ್ತು ಕ್ಷೀಣಿಸುತ್ತಿದ್ದರೂ ಅಲ್ಲಲ್ಲಿ ಕಾಣಸಿಗುವ ಗಿರಿವನರಾಜಿಗಳೂ, ನದೀತಟಗಳೂ ಪ್ರೇಕ್ಷಕರ ಮನಸೆಳೆಯುತ್ತವೆ. ಪ್ರಕೃತಿ ಪ್ರೇಮಿಗಳಾದ ಪೂರ್ವಜರು ಪ್ರಕೃತಿಯನ್ನೇ ದೇವರೆಂದು ಭಾವಿಸಿ ಗಿರಿಶಿಖರಗಳಲ್ಲಿ, ನದೀತಟಗಳಲ್ಲಿ ದೇವಮಂದಿರಗಳನ್ನು ನಿರ್ಮಿಸಿದ್ದು, ಅಂತಹ ಪ್ರಾಚೀನ ಹಾಗೂ ಅರ್ವಾಚೀನ ಕ್ಷೇತ್ರಗಳು ಈ ತಾಲ್ಲೂಕಿನಲ್ಲಿವೆ. ಈ ತಾಲೂಕನ್ನು ಆಳಿದ ರಾಜಮನೆತನಗಳು ತಾಲೂಕಿನಾದ್ಯಂತ ಅನೇಕ ದೇವಾಲಯ, ಕೆರೆ-ಕಟ್ಟೆ, ಬಾವಿ, ಬಸದಿ, ಮಠ, ಅಗ್ರಹಾರ ಮುಂತಾದವನ್ನು ಸ್ಥಾಪಿಸುವ ಮೂಲಕ ತಾಲೂಕಿನ ಸಾಂಸ್ಕೃತಿಕ ಬೆಳವಣಿಗೆಗೆ ಭದ್ರಬುನಾದಿಯನ್ನು ಒದಗಿಸಿದುದಲ್ಲದೆ ಜನರ ಧಾರ್ಮಿಕ ಮನೋಭಾವವನ್ನು ಸಮೃದ್ಧಗೊಳಿಸುವಲ್ಲಿ ಸಹಕಾರಿಯಾಗಿವೆ. ಈ ದೇವಾಲಯಗಳು, ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ಪ್ರಚಲಿತದಲ್ಲಿದ್ದ ಧರ್ಮದ ವಿವಿಧ ಛಾಯೆಗಳನ್ನು, ಪ್ರಾಧಾನ್ಯತೆಗಳನ್ನು ಪ್ರತಿಬಿಂಬಿಸುವುದಲ್ಲದೆ ಜನರ ಅಭಿರುಚಿ, ಧರ್ಮದಲ್ಲಿನ ಆಸ್ಥೆ, ಸಾಮಾಜಿಕ ಸಂಪ್ರದಾಯ, ನಂಬಿಕೆ ಇತ್ಯಾದಿ ಸಮಕಾಲೀನ ವಿಷಯಗಳನ್ನು ತಿಳಿಸುವ ಚಾರಿತ್ರಿಕ ದಾಖಲೆಗಳಾಗಿವೆ. ಅಲ್ಲದೆ ತಾಲೂಕು ಕೇಂದ್ರ ಪಿರಿಯಾಪಟ್ಟಣವೂ ಸೇರಿದಂತೆ ಬೆಟ್ಟದಪುರ, ಕೀರ್ತಿಪುರ, ಮಲ್ಲಿನಾಥಪುರ, ಸೂಳೆಕೋಟೆ, ರಾವಂದೂರು, ಬೆಕ್ಯ, ಅಣ್ಣೂರು, ಬೈಲುಕುಪ್ಪೆ, ಮುಂತಾದ ೧೩೦ಕ್ಕೂ ಹೆಚ್ಚು ಸ್ಥಳಗಳಲ್ಲಿ 'ಸಿ' ವರ್ಗಕ್ಕೆ ಸೇರಿದ ೧೬೯ ಧಾರ್ಮಿಕ ಸಂಸ್ಥೆಗಳನ್ನು ಮುಜರಾಯಿ ಇಲಾಖೆಯು ಪಟ್ಟಿ ಮಾಡಿ ಪ್ರಕಟಿಸಿದ್ದು, ಕೆಲವೆಡೆ ಜಾತ್ರೆಯೂ ಆಗುತ್ತದೆ. ಅವುಗಳಲ್ಲಿ ಮುಖ್ಯವಾದವನ್ನು ಇಲ್ಲಿ ಪರಿಚಯಿಸಲಾಗಿದೆ. ಕಂಸದಲ್ಲಿ ನೀಡಿರುವ ಸಂಖ್ಯೆಯು ೨೦೦೧ರ ಜನಗಣತಿಯಂತೆ ಆಯಾ ಸ್ಥಳದಲ್ಲಿದ್ದ ಜನಸಂಖ್ಯೆಯನ್ನು ಸೂಚಿಸುತ್ತದೆ.

**ಆನವಾಳು(೮೨೬) :** ಪಿರಿಯಾಪಟ್ಟಣದಿಂದ ಉತ್ತರಕ್ಕೆ ಮತ್ತು ಬೆಟ್ಟದಪುರದಿಂದ ಈಶಾನ್ಯಕ್ಕೆ ೨೫ ಕಿ. ಮೀ. ದೂರದಲ್ಲಿದೆ. ಸುಮಾರು ೧೫ನೇ ಶತಮಾನದ ಶಾಸನಗಳಲ್ಲೂ ಆನೆವಾಳ ಎಂದೇ ಉಲ್ಲೇಖಿತಗೊಂಡಿರುವ ಈ ಊರಲ್ಲಿರುವ ಮೂರು ಶಾಸನಗಳೂ ಸ್ಥಳಿಯ ಜೈನಬಸದಿಯ ನಿರ್ಮಾಣಕ್ಕೆ ಸಂಬಂಧಿಸಿದ ದಾಖಲೆಗಳಾಗಿದ್ದು, ಅದರಿಂದ ಬ್ರಹ್ಮದೇವರು ಪದ್ಮಾವತಿಯ ಬಸದಿ ಎಂಬ ಹೆಸರಿದ್ದು, ಅಲ್ಲಿ ಅನಂತನ ಪ್ರತಿಮೆ

ಇದ್ದ ಅಂಶವೂ ವೇದ್ಯವಾಗುತ್ತದೆ. ಊರ ಬಳಿಯ ಬೆಟ್ಟದ ಮೇಲಿರುವ ಬಸದಿಗೆ ಪೂರ್ವದಿಕ್ಕಿನಲ್ಲಿ ಮುಖ್ಯ ಪ್ರವೇಶದ್ವಾರವಿದ್ದು, ಬಾಗಿಲುವಾಡದ ಮೇಲೆ ಮಹಾವೀರನ ಕೆತ್ತನೆಯಿದೆ. ಪ್ರವೇಶದ್ವಾರದ ಮೆಟ್ಟಲಿನಲ್ಲಿ ಆನೆಯ ಮುಖ ಹೊಂದಿರುವ ಚಪ್ಪಡಿಗಳಿವೆ. ಈ 'ಬಸದಿಯ' ಪ್ರವೇಶದ್ವಾರದ ಮುಂದೆ ಮುಖಮಂಟಪವಿದ್ದು, ನವರಂಗದ ದಕ್ಷಿಣ ಮತ್ತು ಉತ್ತರದಿಕ್ಕಿಗೆ ಮುಖಮಂಟಪಗಳಿವೆ.

**ಆಯತನಹಳ್ಳಿ (೧,೭೯೫):** ಪಿರಿಯಾಪಟ್ಟಣದಿಂದ ಉತ್ತರಕ್ಕೆ ೧೦ ಕಿ. ಮೀ. ದೂರದಲ್ಲಿದೆ. ಇಲ್ಲಿಯ ಬಸವೇಶ್ವರ ದೇವಾಲಯವು ಉತ್ತರಾಭಿಮುಖವಾಗಿರುವ ಏಕಕೂಟವಾಗಿದ್ದು, ಗರ್ಭಗೃಹ ಮತ್ತು ನವರಂಗಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಸುಮಾರು ಮೂರು ಅಡಿ ಎತ್ತರದ ಬಸವನ ವಿಗ್ರಹವಿದೆ. ನವರಂಗದಲ್ಲಿ ಭುವನೇಶ್ವರಿ ಇದ್ದು, ಕಂಬಗಳು ವಿಜಯನಗರ ಶೈಲಿಯಲ್ಲಿವೆ. ಇಲ್ಲಿಯ ಬಸವನಗುಡಿ ಮುಂದಿರುವ ೧೫೭೫ರ ಶಾಸನ; ಚೆಂಗಾಳ್ವ ವೀರಚಿಕ್ಕರಾಜುವೊಡೆಯನು ಮಲ್ಲಿಕಾರ್ಜುನನಿಗೆ ಈ ಗ್ರಾಮವನ್ನು ದತ್ತಿ ನೀಡಿದ್ದನ್ನು ದಾಖಲಿಸಿದೆ.

**ಕಂಪಲಾಪುರ (೪,೪೫೦):** ಪಿರಿಯಾಪಟ್ಟಣದಿಂದ ಪೂರ್ವಕ್ಕೆ ಏಳು ಕಿ.ಮೀ. ದೂರದಲ್ಲಿದೆ. ಊರಲ್ಲಿರುವ ಕರಕಂಠೇಶ್ವರ ದೇವಾಲಯವು ಸುಮಾರು ೯–೧೦ನೇ ಶತಮಾನದಲ್ಲಿ ನಿರ್ಮಾಣವಾಗಿದ್ದು, ಗರ್ಭಗೃಹದಲ್ಲಿ ಶಿವಲಿಂಗವಿದ್ದು ಮೇಲೆ ಭುವನೇಶ್ವರಿ ಇದೆ. ದೇವಾಲಯದ ಪ್ರದಕ್ಷಿಣಪಥದ ಬಾವಿಯ ಕಲ್ಲಿನ ಮೇಲೆ ಶಾಸನವಿದೆ. ಬಾವಿಯ ಪಕ್ಕದಲ್ಲಿಯೇ ಹೊಯ್ಸಳರ ಕಾಲದ ವೀರಗಲ್ಲು ಇದ್ದು ಅದರಲ್ಲಿ ಯೋಧ ಯುದ್ಧ ಮಾಡುತ್ತಿರುವ ದೃಶ್ಯ ಮತ್ತು ಅಪ್ಸರೆಯರು ಮಡಿದ ಯೋಧನನ್ನು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ದೃಶ್ಯಗಳನ್ನು ಮನೋಹರವಾಗಿ ಕೆತ್ತಲಾಗಿದೆ.

**ಕಿತ್ತೂರು (೪,೫೩೪):** ಇದು ಪಿರಿಯಾಪಟ್ಟಣದಿಂದ ಉತ್ತರಕ್ಕೆ ಸುಮಾರು ೨೭ ಕಿ.ಮೀ. ದೂರದಲ್ಲಿದೆ. ಪ್ರಾಚೀನ ಕಾಲದಲ್ಲಿ ಕೀರ್ತಿಊರು ಅಥವಾ ಕೀರ್ತಿಪುರ ಎನಿಸಿದ್ದ ಊರೇ ಇಂದಿನ ಕಿತ್ತೂರೆಂದು ಪ್ರತೀತಿ. ಶ್ರೋತ್ರಿಯೂರು ಜನಸಾಮಾನ್ಯರ ಉಚ್ಚಾರಣೆಯಲ್ಲಿ ಸುತ್ತೂರಾದಂತೆ ಕೀರ್ತಿಯೂರು ಕಿತ್ತೂರಾಗಿದೆ. ಕಿತ್ತೂರಿನ ಭದ್ರಕೋಟೆಯಲ್ಲಿ ಚಂಗಾಳ್ವರ ರಾಜ ಭಂಡಾರವಿತ್ತೆಂದೂ ಆ ಊರಿಗೆ ಸಮೀಪದಲ್ಲೇ ನೈರುತ್ಯ ದಿಕ್ಕಿನಲ್ಲಿರುವ ಕೊತ್ತವಳ್ಳಿಯಲ್ಲಿ ಟಂಕಸಾಲೆ ಇತ್ತೆಂದೂ ತಿಳಿದುಬರುತ್ತದೆ. ಇಲ್ಲಿ ಇಂದಿಗೂ ಕೋಟೆಯ ಅವಶೇಷಗಳು, ಒಡೆದು ಬಿದ್ದಿರುವ ಶಾಸನಗಳೂ ಹಳೆಯ ಕಾಲದ ದೇವಾಲಯಗಳು ಚಂಗಾಳ್ವ ಗತಕಾಲದ ಇತಿಹಾಸದ ಮೂಕಸಾಕ್ಷಿಗಳಾಗಿವೆ. ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಕೋಟೆ ಬಾಗಿಲ ಬಳಿಯಿರುವ ೧೦೦೮ರ ಶಾಸನದಲ್ಲೂ ಊರ ಹೆಸರು ಕಿತ್ತೂರು ಎಂದೇ ದಾಖಲಾಗಿದೆ. ಸುಮಾರು ೧೨ನೆಯ ಶತಮಾನಕ್ಕೆ ಸೇರಿದ ಇನ್ನೆರಡು ವೀರಗಲ್ಲು ಶಾಸನಗಳಾಗಿದ್ದು, ಉಳಿದೊಂದು ೧೭ನೇ ಶತಮಾನಕ್ಕೆ ಸೇರಿದ್ದು, ಸೋಮಯ್ಯ ದೇವರ ಶಿವಾಲಯದ ಕಾರ್ಯವನ್ನು ಪೂರ್ಣಗೊಳಿಸಿದ್ದನ್ನು ದಾಖಲಿಸುತ್ತದೆ. ಇಲ್ಲಿಯ

“ನಾರಾಯಣಸ್ವಾಮಿ ದೇವಾಲಯ”ವು ಪೂರ್ವಾಭಿಮುಖವಾಗಿದ್ದು ಏಕಕೂಟ ದೇವಾಲಯವಾಗಿದೆ. ಗರ್ಭಗೃಹದಲ್ಲಿ ನಾರಾಯಣಸ್ವಾಮಿ ವಿಗ್ರಹವಿದ್ದು, ಇಕ್ಕೆಲಗಳಲ್ಲಿ ಶ್ರೀದೇವಿ ಭೂದೇವಿಯರ ವಿಗ್ರಹಗಳಿವೆ. ಇತ್ತೀಚೆಗೆ ದೇವಾಲಯದ ಮೇಲೆ ಸಿಮೆಂಟ್‌ಗಾರೆಯನ್ನು ಹಾಕಿದ್ದಾರೆ. ಈ ದೇವಾಲಯವು ವಿಜಯನಗರದ ಕಾಲದ ವಾಸ್ತುಶೈಲಿಯನ್ನು ಹೊಂದಿದೆ. ಊರ ಮಧ್ಯದಲ್ಲಿರುವ ಸೋಮೇಶ್ವರ ದೇವಾಲಯವು ದ್ರಾವಿಡ ಶೈಲಿಯನ್ನು ಹೊಂದಿರುವ ಏಕಕೂಟವಾಗಿದ್ದು, ಚೋಳ ಮತ್ತು ಹೊಯ್ಸಳರ ಸಮ್ಮಿಶ್ರ ವಾಸ್ತುಶೈಲಿಯನ್ನು ಹೊಂದಿದೆ. ಇಲ್ಲಿಯ ಪವಾಡ ಬಸವೇಶ್ವರ ದೇವಾಲಯವು ಶಿಡ್ಲುಮಲ್ಲಿಕಾರ್ಜುನಸ್ವಾಮಿ ದೇವಾಲಯದ ಎದುರಿನಲ್ಲಿದೆ. ಇದು ಸಹ ದ್ರಾವಿಡ ಶೈಲಿಯ ಏಕಕೂಟ ದೇವಾಲಯವಾಗಿದ್ದು, ಪಶ್ಚಿಮಾಭಿಮುಖವಾಗಿದೆ. ಇದೂ ಚಂಗಾಳ್ವರ ಕಾಲದ್ದು. ಇದರ ಗರ್ಭಗೃಹದಲ್ಲಿ ನಂದಿ ವಿಗ್ರಹವಿದೆ. ನವರಂಗದ ಇಕ್ಕೆಲದಲ್ಲಿ ದ್ವಾರಪಾಲಕರು ಮತ್ತು ಸಪ್ತಮಾತೃಕೆಯರ ಸಣ್ಣ ಸಣ್ಣ ವಿಗ್ರಹಗಳಿವೆ, ಇಲ್ಲಿರುವ ಕಂಬಗಳು ಚೌಕಾಕಾರದ್ದಾಗಿದ್ದು ೧೬ ಮುಖವನ್ನು ಹೊಂದಿರುವಂತಹವು. ಪ್ರವೇಶದ್ವಾರದ ದೇವಾಲಯದ ಮೇಲ್ಭಾಗದಲ್ಲಿ ಸಿಮೆಂಟಿನ ದೊಡ್ಡದಾದ ನಂದಿಯ ವಿಗ್ರಹವನ್ನು ಸ್ಥಾಪಿಸಿದ್ದಾರೆ. ರಾಮದೇವಾಲಯವು ಶಿಡ್ಲು ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಹಿಂಭಾಗದಲ್ಲಿದ್ದು ಪೂರ್ವಾಭಿಮುಖವಾಗಿದೆ. ದ್ರಾವಿಡ ಶೈಲಿಯ ಈ ಏಕಕೂಟ ದೇವಾಲಯವು ಮೂಲತಃ ಚಂಗಾಳ್ವರ ವಾಸ್ತುಶೈಲಿಯನ್ನು ಹೊಂದಿದ್ದು, ಜೊತೆಗೆ ಮೈಸೂರು ಒಡೆಯರ ಕಾಲದ ಹಿಂದೂ ಮುಸ್ಲಿಂ ಶೈಲಿಯನ್ನು ಕಾಣಬಹುದಾಗಿದೆ. ಜನಪದ ವೀರಕಾವ್ಯ ಪಿರಿಯಾಪಟ್ಟಣ ಕಾಳಗದಲ್ಲಿ ಈ ಊರಿನ ಮಾಹಿತಿ ಇದೆ. ಇದನ್ನು ಪಿರಿಯಾಪಟ್ಟಣದ ಚಂಗಾಳ್ವರ ಪ್ರತಿನಿಧಿಯಾದ ಸತ್ಯರಾಜರಸನೆಂಬ ಸಾಮಂತ ಆಳುತ್ತಿದ್ದನೆಂದು ಇಲ್ಲಿ ಮೈಸೂರು ಸೈನ್ಯಕ್ಕೂ ವೀರರಾಜನಿಗೂ ಯುದ್ಧವಾಯಿತೆಂದು ಪಿರಿಯಪಟ್ಟಣದ ಕಾಳಗದಲ್ಲಿ ಉಲ್ಲೇಖಗೊಂಡಿದೆ.

**ಕುಡುಕೂರು (೫೨೩) :** ಕುಡುಕೂರು ಪಿರಿಯಾಪಟ್ಟಣದಿಂದ ಉತ್ತರಕ್ಕೆ ೧೫ ಕಿ. ಮೀ. ದೂರದಲ್ಲಿ, ಬೆಟ್ಟದಪುರಕ್ಕೆ ಸಮೀಪದಲ್ಲಿದೆ. ಇಲ್ಲಿಂದ ಈವರೆಗೆ ಆರು ಶಾಸನಗಳು ವರದಿಯಾಗಿದ್ದು, ಚಾಳುಕ್ಯ ಪೆರ್ಮಾನಡಿಯ ಪುತ್ರಿ ಪಂಪಾದೇವಿಯು ರಾಜ್ಯಭಾರ ನಡೆಸುತ್ತಿದ್ದ ಅಂಶವನ್ನು ಇಲ್ಲಿಯ ೯೮ರ ಶಾಸನವೊಂದು ತಿಳಿಸಿದರೆ, ಈ ಗ್ರಾಮವು ಅನ್ನದಾನಿ ಮಲ್ಲಿಕಾರ್ಜುನನ ಉಂಬಳಿ ಗ್ರಾಮವಾಗಿದ್ದ ಅಂಶ ಇನ್ನೊಂದು ಶಾಸನದಲ್ಲಿದೆ. ಇಲ್ಲಿ ದ್ರಾವಿಡಶೈಲಿಯ ಬಸವೇಶ್ವರ ದೇವಾಲಯವಿದ್ದು, ಕಂಬಗಳ ಮೇಲೆ ಗಣಪ, ಭೈರವ, ಸ್ತ್ರೀನೃತ್ಯ, ಸರ್ಪ, ನಾಗಲಿಂಗ, ನವಿಲು, ಆನೆ, ರಾಮ ಮುಂತಾದ ಚಿತ್ತಾರದ ಕೆತ್ತನೆಗಳಿವೆ. ಗೋಪುರವು ದ್ರಾವಿಡ ಶೈಲಿಯನ್ನು ಹೊಂದಿದ್ದು, ನಾಲ್ಕು ಮೂಲೆಯಲ್ಲಿಯೂ ನಂದಿ ವಿಗ್ರಹಗಳಿವೆ. ದೇವಾಲಯದ ಮುಂದೆ ಸುಮಾರು ೩೦ ಅಡಿ ಎತ್ತರದ ನಂದಿಕಂಬವಿದೆ.

**ಕೂರಗಲ್ಲು (೭೩೦) :** ಪಿರಿಯಪಟ್ಟಣಕ್ಕೆ ೧೨ ಕಿ.ಮೀ. ದೂರದಲ್ಲಿರುವ ಇಲ್ಲಿಂದ ಈವರೆಗೆ ಎಂಟು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ೯ನೇ ಶತಮಾನಕ್ಕೆ ಸೇರಿದ ಗಂಗಶಾಸನದಿಂದ, ಎರೆಯಪ್ಪನು ಕೊಂಗಳ್ನಾಡು–೮೦೦೦ ವನ್ನಾಳುತ್ತಿದ್ದಾಗ,

ಬೂತುಗನರಸಿ ಪರಮಬ್ಬೆ ಕುರ್ಗಲ್ಲನ್ನು ಆಳುತ್ತಿದ್ದು, ಮಡಿದ ಕೂರ್ಗಲ್ಲ ಗೌಡನ ಕುಟುಂಬಕ್ಕೆ ಮೂಗಂಡುಗ ಕಾಲ್ನಡು ದತ್ತಿ ಬಿಟ್ಟಿದ್ದು ಗೊತ್ತಾಗುತ್ತದೆ. ಇಲ್ಲಿಯ ೧೩೪೯ರ ಇನ್ನೊಂದು ಶಾಸನ ಮಲ್ಲಿಕಾರ್ಜುನ ದೇವರ ಹೂವಿನ ತೋಟದ ವ್ಯವಸಾಯಕ್ಕೆಂದು ೨೮೪ ಗದ್ಯಾಣ ನೀಡಿದ್ದನ್ನು ದಾಖಲಿಸಿದೆ. ಉಳಿದ ಶಾಸನಗಳು (೧೫–೧೬ನೇ ಶ.) ನೆರೆಯ ಬೆಟ್ಟದಪುರದ ಅನ್ನದಾನಿ ಮಲ್ಲಿಕಾರ್ಜುನನಿಗೆ ನೀಡಿರುವ ದತ್ತಿಗಳಾಗಿದ್ದು, ಇಲ್ಲಿಯ ಶಾಸನವೊಂದರಲ್ಲಿ ಇವನನ್ನು ಕುಡುಕೂರ ಮಲ್ಲಿಕಾರ್ಜುನನೆಂದೇ ಕರೆಯಲಾಗಿದೆ.

**ಕೊಣಸೂರು (೨೦೦೨)** : ಪಿರಿಯಾಪಟ್ಟಣದಿಂದ ಉತ್ತರಕ್ಕೆ ૩೦ ಕಿ. ಮೀ. ದೂರದಲ್ಲಿದೆ. ಇಲ್ಲಿಯ ಶಾಂತಿನಾಥ ಬಸದಿಯು ಪೂರ್ವಾಭಿಮುಖವಾಗಿರುವ ಏಕಕೂಟವಾಗಿದೆ. ಶಿಥಿಲಗೊಂಡಿದ್ದ ಈ ದೇವಾಲಯವನ್ನು ಧರ್ಮಸ್ಥಳದ ಧರ್ಮೋತ್ಥಾನ ಸಮಿತಿಯವರು ಜೀರ್ಣೋದ್ಧಾರ ಮಾಡಿಸಿದ್ದಾರೆ. ಬಹುಶಃ ಈ ಬಸದಿಯು ಗಂಗರ ಕಾಲದ್ದಾಗಿದ್ದರೂ, ನವರಂಗದಲ್ಲಿರುವ ಕಂಬಗಳು ನಂತರದ ಶೈಲಿಯನ್ನು ಬಿಂಬಿಸುತ್ತವೆ. ಹಿಂದೆ ಜೈನಕೇಂದ್ರವಾಗಿದ್ದ, ಈ ಊರಿನಲ್ಲಿರುವ ಶಾಂತೇಶ್ವರ ಬಸದಿಯನ್ನು ೧೮ನೇ ಶತಮಾನದಲ್ಲಿ ಕಾಂತೂರ ವೀರಶೆಟ್ಟಿಯು ಜೀರ್ಣೋದ್ಧಾರ ಮಾಡಿಸಿದ್ದನ್ನು ತಿಳಿಸಿದರೆ, ಬಸವನಗುಡಿ ಬಳಿಯಿರುವ ೧೫೯೧ರ ಶಾಸನ ಚಂಗಾಲ್ವ ಪಿರಿಯರಾಜದೇವರಸನು ಪಟ್ಟದರಾಣಿವಾಸಕ್ಕೆ ಕೈಲಾಸ ಲಭಿಸಲೆಂದು ವಿರೂಪಾಕ್ಷ ಪುರವನ್ನು ಅನ್ನದಾನಿ ಮಲ್ಲಿಕಾರ್ಜುನನಿಗೆ ದತ್ತಿ ಬಿಟ್ಟಿದ್ದನ್ನು ದಾಖಲಿಸಿದೆ. ಇದರಿಂದ ಈ ಗ್ರಾಮಕ್ಕೆ ಹಿಂದೆ ವಿರೂಪಾಕ್ಷಪುರ ಎಂಬ ಹೆಸರಿದ್ದ ಅಂಶವೂ ವೇದ್ಯವಾಗುತ್ತದೆ. ನೆರೆಯ ಬೂವನಹಳ್ಳಿಯಲ್ಲಿ ಚಂದ್ರನಾಥ ಬಸದಿಯಿದೆ.

**ಚಾಮರಾಯನ ಕೋಟೆ (೨,೨೭೧)** : ಕಾವೇರಿ ನದಿಯ ಬಲದಂಡೆಯಲ್ಲಿರುವ ಈ ಗ್ರಾಮವು ಚೆಂಗಾಳ್ವರ ಸಾಮಂತ ಪ್ರಭುವಾಗಿದ್ದ ಚಾಮರಾಯನಿಂದ ನಿರ್ಮಿತವಾಗಿದ್ದ ಕೋಟೆಯನ್ನು ಹೊಂದಿದ್ದು, ಸುಮಾರು ೧೬ನೇ ಶತಮಾನಕ್ಕೆ ಸೇರಿದ ಶಾಸನದಲ್ಲಿ ಇದು 'ಚೆಂಬುರಾಯನ ಕೋಟೆ' ಎಂದೇ ಉಲ್ಲೇಖಿತಗೊಂಡಿದ್ದು, ವೀರನಾಯಕನಿಗಾಗಿ ನಿಲ್ಲಿಸಿದ ವೀರಗಲ್ಲಾಗಿದೆ. ಇಂದು ಸಂಪೂರ್ಣ ಹಾಳಾಗಿದ್ದರೂ ಅದರ ಪಳೆಯುಳಿಕೆಯನ್ನು ನದೀದಂಡೆಯುದ್ದಕ್ಕೂ ಕಾಣಬಹುದಾಗಿದೆ. ಇಲ್ಲಿ, ಕಾವೇರಿ ನದಿಯ ಮಧ್ಯೆ ಬಂಡೆಯೊಂದು ಬಿರುಕುಬಿಟ್ಟು ಅಲ್ಲೊಂದು ಆಂಜನೇಯನ ಮೂರ್ತಿ ಒಡಮೂಡಿ ಪವಿತ್ರವೆನಿಸಿದ್ದು, ಪ್ರತಿವರ್ಷವೂ ಜಾತ್ರೆ ನಡೆಯುತ್ತದೆ. ಪಿರಿಯಾಪಟ್ಟಣದ ಕೋಟೆಯನ್ನು ಕ್ರಿ.ಶ. ೧೬೪೪ರಲ್ಲಿ ರಣಧೀರ ಕಂಠೀರವ ನರಸರಾಜರು ಆಕ್ರಮಿಸಿದಾಗ ಅಲ್ಲಿಂದ ತಪ್ಪಿಸಿಕೊಂಡ ವೀರರಾಜನು ಈ ಕೋಟೆಯಲ್ಲಿ ಆಶ್ರಯಪಡೆದಿದ್ದನೆಂದು ಇತಿಹಾಸ ಹೇಳುತ್ತದೆ.

**ಪಿರಿಯಾಪಟ್ಟಣ (೧೪,೯೨೪)** : ಇಂದು ತಾಲೂಕು ಕೇಂದ್ರವಾಗಿರುವ ಪಿರಿಯಾಪಟ್ಟಣವು ೧೮೬೯ರಲ್ಲಿ ತಾಲೂಕಾಗಿ ರೂಪುಗೊಂಡರೂ ಹುಣಸೂರು ತಾಲೂಕು ಕೇಂದ್ರವಾಗಿತ್ತು. ೧೯೩೧ರಲ್ಲಿ ಉಪತಾಲೂಕಾಗಿದ್ದ ಪಿರಿಯಾಪಟ್ಟಣ ೧೯೩೫ರ ಸುಮಾರು

ಪೂರ್ಣಪ್ರಮಾಣದ ತಾಲೂಕಾಗಿ ಪಿರಿಯಾಪಟ್ಟಣ ಅಂದರೆ ತಾಲೂಕು ಕೇಂದ್ರವಾಯಿತು. ಪ್ರಸ್ತುತ, ಜಿಲ್ಲಾ ಕೇಂದ್ರ ಮೈಸೂರಿನಿಂದ ೬೭ ಕಿ.ಮೀ. ಪಶ್ಚಿಮಕ್ಕಾದಂತೆ ಮೈಸೂರು–ಮಡಿಕೇರಿ ರಾಜ್ಯ ಹೆದ್ದಾರಿಯ ಮೇಲಿರುವ ಪ್ರಮುಖ ಪಟ್ಟಣ. ಪಿರಿಯಾಪಟ್ಟಣ ಕಾಳಗದಿಂದಾಗಿ ಇತಿಹಾಸ ಪ್ರಸಿದ್ಧವಾಗಿದೆ. ಸಿಂಗಪಟ್ಟಣ, ಪಿರಿಯಾಪಟ್ಟಣದ ಪ್ರಾಚೀನ ಹೆಸರಾಗಿದ್ದು, ಕೂರಗಲ್ಲಿನ ೧೫ನೇ ಶತಮಾನದ ಶಾಸನ ಹಾಗೂ ಸುಮಾರು ೧೬ನೇ ಶತಮಾನಕ್ಕೆ ಸೇರಿದ ಗೋರಹಳ್ಳಿ ಶಾಸನದಲ್ಲಿ ಇದು ಸಿಂಗಪಟ್ಟಣ ಎಂದೇ ದಾಖಲಾಗಿದೆ. ೧೫೪೮ರ ಮಲ್ಲಿನಾಥಪುರ ಶಾಸನದಲ್ಲೂ ಸಿಂಗಪಟ್ಟಣದ ಉಲ್ಲೇಖವಿದೆ. ಈ ಪಟ್ಟಣವನ್ನು ಚೆಂಗಾಲ್ವ ಪಿರಿಯರಾಜದೇವನು ಜೀರ್ಣೋದ್ಧಾರ ಮಾಡಿಸಿ, ಅದಕ್ಕೆ ಪಿರಿಯರಾಜಪಟ್ಟಣ ಎಂದು ಹೆಸರಿಟ್ಟು, ರಾಜಧಾನಿಯನ್ನಾಗಿ ಮಾಡಿಕೊಂಡ ಅಂಶ ೧೫೬೦ರ ಪಿರಿಯಾಪಟ್ಟಣದ ಚೆನ್ನಿಗರಾಯನ ಗುಡಿಯ ಶಾಸನದಿಂದ ಸ್ಪಷ್ಟವಾಗುತ್ತದೆ. ಚೆಂಗಾಳ್ವರಸರ ರಾಜಧಾನಿಯಾಗಿ ಮೆರೆದಿದ್ದ ಈ ಪಟ್ಟಣದ ಪ್ರಸಿದ್ಧಿ ತಲೆ ತಲಾಂತರದಿಂದಲೂ ಮಾಸದೆ ಉಳಿದಿದೆ. ೧೬೪೮ರಲ್ಲಿ ಮೈಸೂರು ಒಡೆಯರಾಗಿದ್ದ ಕಂಠೀರವ ಒಡೆಯರು ಚೆಂಗಾಳ್ವರಸ ವೀರರಾಜೇಂದ್ರನನ್ನು ಸೋಲಿಸಿದನಂತರ ಈ ಪಟ್ಟಣ ಕ್ಷೀಣಿಸಲಾರಂಭಿಸಿತು. ಆದರೂ ಅಂದಿನ ಕಾಲದ ಕೋಟೆಯ ಅವಶೇಷಗಳನ್ನು ಇಂದಿಗೂ ಕಾಣಬಹುದು. ಇಲ್ಲಿ ಇತಿಹಾಸ ಪ್ರಸಿದ್ಧವಾದ ಮಸಣಿಕಮ್ಮ, ವೈದ್ಯೇಶ್ವರ, ಚೆನ್ನಕೇಶವ ಹಾಗೂ ಇತ್ತೀಚಿನದಾದ ಕನ್ನಂಬಾಡಿಯಮ್ಮ ಮತ್ತು ಮಹದೇಶ್ವರ ದೇವಾಲಯಗಳಿವೆ. ಅಲ್ಲದೆ ನೂರೊಂದು ಲಿಂಗಗಳೆಂದು ಹೇಳುವ ನೂರೊಂದಯ್ಯನ ದೇವಾಲಯವಿದೆ. ಈ ದೇವಾಲಯದಲ್ಲಿರುವ ಶಿವಲಿಂಗಗಳು ಪ್ರಾಚೀನ ಶಿಲಾಯುಗದ ಆಯುಧ ವಿಶೇಷಗಳೋ ಎಂದು ನಿರ್ಧರಿಸುವ ಅಗತ್ಯವಿದೆ. ಹಿಂದಿನ ರಾಜರು ನೀರು ಸರಬರಾಜಿಗೆಂದು ಕಟ್ಟಿಸಿದ ಕೆರೆಕಟ್ಟೆ ಹಾಗೂ ನಗರ ಮಧ್ಯದಲ್ಲಿನ ಪುಷ್ಕರಣಿ ಮುಂತಾದವನ್ನು ಈಗಲೂ ಕಾಣಬಹುದಾಗಿದೆ. ಪ್ರತಿವರ್ಷವೂ ಈ ಎಲ್ಲಾ ದೇವಸ್ಥಾನಗಳಲ್ಲಿ ನಡೆಯುವ ರಥೋತ್ಸವ, ಜಾತ್ರೆ, ಇತ್ಯಾದಿಗಳು, ಮೈಸೂರು ಹಾಗೂ ಕೊಡಗು ಜಿಲ್ಲೆಯಿಂದ ಪ್ರವಾಸಿಗಳನ್ನೂ ಯಾತ್ರಾರ್ಥಿಗಳನ್ನೂ ಆಕರ್ಷಿಸುತ್ತಿವೆ.

ಪಿರಿಯಾಪಟ್ಟಣದ ಕೋಟೆಯುಲ್ಲಿರುವ ಚನ್ನಕೇಶವ ದೇವಾಲಯುವು ಪೂರ್ವಾಭಿಮುಖವಾಗಿದ್ದು ದ್ರಾವಿಡ ಶೈಲಿಯಲ್ಲಿರುವ ಏಕಕೂಟವಾಗಿದ್ದು ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಕೇಶವ ವಿಗ್ರಹವಿದ್ದು, ಮೇಲ್ಭಾಗದ ಭುವನೇಶ್ವರಿಯಲ್ಲಿ ಕಮಲದ ಹೂವಿದೆ. ಗರ್ಭಗೃಹದ ದ್ವಾರಬಂಧದ ಲಲಾಟದಲ್ಲಿ ಸಿಂಹದ ವಿಗ್ರಹವಿದೆ. ಜೊತೆಗೆ ಸ್ತ್ರೀಯರು ನರ್ತನ ಮಾಡುತ್ತಿರುವ ವಿವಿಧ ಭಂಗಿಯನ್ನು ಕಾಣುತ್ತೇವೆ. ಶುಕನಾಸಿಯಲ್ಲಿ ಗಣಪತಿ, ಬಸವ ಹಾಗೂ ಸಪ್ತಮಾತೃಕೆಯರ ವಿಗ್ರಹಗಳಿವೆ. ನವರಂಗದ ಮಧ್ಯದ ಕಂಬಗಳಲ್ಲಿ ಉಬ್ಬು ಶಿಲ್ಪಗಳ ಕೆತ್ತನೆ ಇವೆ. ಈ ಕಂಬಗಳು ವಿಜಯನಗರ ಅರಸರ ಕಾಲದ ವಾಸ್ತುಶೈಲಿಯನ್ನು ಹೊಂದಿವೆ. ನವರಂಗದ ಬಾಗಿಲುವಾಡದ ಮೇಲೆ ಗಜಲಕ್ಷ್ಮಿಯ ವಿಗ್ರಹವಿದೆ. ಮುಖಮಂಟಪದಲ್ಲಿ ೧೨ ಕಂಬಗಳಿದ್ದು ನಾಲ್ಕು ಕಂಬಗಳು ಚೋಳ ವಾಸ್ತುಶೈಲಿಯನ್ನೂ

ಎಂಟು ಕಂಬಗಳು ಗಂಗ ಮತ್ತು ವಿಜಯನಗರ ಅರಸರ ಕಾಲದ ವಾಸ್ತುಶೈಲಿಯನ್ನು ಹೊಂದಿದ್ದು, ಮಧ್ಯದ ನಾಲ್ಕು ಕಂಬಗಳಲ್ಲಿ ವಿವಿಧ ಬಗೆಯ ಉಬ್ಬುಶಿಲ್ಪ ಕೆತ್ತನೆಗಳಿದ್ದು, ಅಲಂಕಾರಯುಕ್ತವಾಗಿವೆ.

ಮಸಣೀಕಮ್ಮನ ದೇವಾಲಯವೂ ಏಕಕೂಟವಾಗಿದ್ದು, ದ್ರಾವಿಡ ಶೈಲಿಯಲ್ಲಿದ್ದು, ಪೂರ್ವಾಭಿಮುಖವಾಗಿದೆ. ಇದಕ್ಕೆ ಗರ್ಭಗೃಹ, ಶುಕನಾಸಿ ಮತ್ತು ನವರಂಗಗಳಿದ್ದು, ಗರ್ಭಗೃಹದಲ್ಲಿ ಮಸಣಿಕಮ್ಮಳಲ್ಲದೆ ಚಿಕ್ಕಮ್ಮ, ಹನ್ಯಾಳಮ್ಮ, ತೋಟದಮ್ಮ, ಗಣಪತಿ, ದೊಡ್ಡಮ್ಮ, ಮುಂತಾದ ಅನೇಕ ಸಣ್ಣ ವಿಗ್ರಹಗಳಿವೆ. ಶುಕನಾಸಿಯ ಅಕ್ಕಪಕ್ಕದ ಜಗುಲಿಯ ಮೇಲೆ ಸಪ್ತಮಾತೃಕೆಯರ ವಿಗ್ರಹಗಳಿವೆ. ಈ ದೇವಾಲಯದ ಕಂಬಗಳ ಮೇಲೆ ಸಿಂಹ ಕೆತ್ತನೆಯಿದೆ. ಈ ದೇವತೆ ಮೂಲದಲ್ಲಿ ಜೈನ ಯಕ್ಷಿ ಮಹಾಮಾನಸಿಯಾಗಿದ್ದಳೆಂಬ ಅಭಿಪ್ರಾಯವಿದೆ. ವೈದ್ಯನಾಥೇಶ್ವರ ದೇವಾಲಯವು, ಕೋಟೆಬಡಾವಣೆಯಲ್ಲಿದ್ದು ದ್ರಾವಿಡ ಶೈಲಿಯ ದೇವಾಲಯಕ್ಕೆ ಉತ್ತಮ ಉದಾಹರಣೆಯಾಗಿದೆ. ಈ ದೇವಾಲಯವು ಗರ್ಭಗೃಹ, ಶುಕನಾಸಿ, ನವರಂಗ, ಮುಖಮಂಟಪ ಮತ್ತು ಸಭಾಮಂಟಪಗಳನ್ನು ಹೊಂದಿದೆ. ಗರ್ಭಗುಡಿ, ಶುಕನಾಸಿ ಮತ್ತು ನವರಂಗ ಭಾಗ ಚೋಳರ ಕಾಲಕ್ಕೆ ಸೇರಿದ್ದು; ಉಳಿದವು ವಿಜಯನಗರ ಅರಸರ ಕಾಲದ ವಿಸ್ತರಣೆಯಾಗಿವೆ. ಗರ್ಭಗೃಹದಲ್ಲಿರುವ ಶಿವಲಿಂಗ ಸೊಗಸಾಗಿದೆ. ದೇವಾಲಯದ ನಾಲ್ಕು ಮೂಲೆಯಲ್ಲೂ ನಂದಿ ವಿಗ್ರಹಗಳಿದ್ದು ಗರ್ಭಗುಡಿ, ಶುಕನಾಸಿ ಹಾಗೂ ನವರಂಗಗಳ ಅಂಕಣದ ಹೊರಭಿತ್ತಿಯಲ್ಲಿ ಚೋಳರ ಕಾಲದ ಅರೆಗಂಬ ಮತ್ತು ಕೋಷ್ಟಗಳಿವೆ.

**ಬೂವನಹಳ್ಳಿ (೧೭೫೩) :** ಪಿರಿಯಾಪಟ್ಟಣದಿಂದ ಉತ್ತರಕ್ಕೆ ೧೫ ಕಿ. ಮೀ. ದೂರದಲ್ಲಿದೆ. ಊರ ಬಳಿಯ ಸಣ್ಣ ಬೆಟ್ಟದ ಮೇಲೆ "ಆದಿನಾಥ ತೀರ್ಥಂಕರ ಬಸದಿ" ಇದೆ. ಇದು ಗಂಗರ ಕಾಲದ ವಾಸ್ತುಶೈಲಿಯನ್ನು ಹೊಂದಿದೆ. ಗರ್ಭಗುಡಿಯಲ್ಲಿರುವ ಆದಿನಾಥ ವಿಗ್ರಹವು ಸೊಗಸಾದ ಕೆತ್ತನೆಯಿಂದ ಕೂಡಿದೆ. ಚಂದ್ರನಾಥ ಬಸದಿಯ ಜಿನಬಿಂಬ ಶಾಸನ, ಬಾಳಚಂದ್ರ ಸಿದ್ಧಾಂತ ಭಟರ ಶಿಷ್ಯರ ನಿಷಿದಿಗೆಯನ್ನು ತಿಳಿಸುತ್ತದೆ.

**ಬೆಕ್ಕರೆ (೯೯೦):** ಪಿರಿಯಾಪಟ್ಟಣದಿಂದ ಉತ್ತರಕ್ಕೆ ೧೨ ಕಿ. ಮೀ. ದೂರದ ಈ ಗ್ರಾಮದಲ್ಲಿರುವ ಬಸವೇಶ್ವರನ ದೇವಾಲಯವು ಪೂರ್ವಾಭಿಮುಖವಾಗಿದೆ. ಈ ಏಕಕೂಟ ದೇವಾಲಯದ ನಾಲ್ಕು ಕಂಬಗಳ ಮೇಲೆ ನಂದಿ, ಭೃಂಗಿ, ಕೃಷ್ಣ, ಲಿಂಗ, ಭೈರವ, ಸಿಂಹ, ಗಿಳಿ, ಆಡು, ರತಿ, ಶಿವ ಮುಂತಾದ ಉಬ್ಬು ಶಿಲ್ಪಗಳಿವೆ. ಇದು ಗಂಗರ ಕಾಲದ್ದೆಂಬ ಅಭಿಪ್ರಾಯವಿದೆ. ಇಲ್ಲಿಂದ ಈವರೆಗೆ ಮೂರು ಶಾಸನಗಳು ವರದಿಯಾಗಿದ್ದು, ಒಂದು ಶಾಸನ ಅಲ್ಲಿಯ ಪ್ರಾಣನಾಥ-ನಿತ್ಯವರದ ಮಲ್ಲಿಕಾರ್ಜುನನಿಗೆ ದತ್ತಿ ಬಿಟ್ಟಿದ್ದನ್ನು ತಿಳಿಸಿದರೆ, ಇನ್ನೊಂದು (೧೬೧೯) ಚೆಂಗಾಳ್ವರ ದತ್ತಿ ಶಾಸನವಾಗಿದೆ.

**ಬೆಟ್ಟದಪುರ (೫,೮೩೭):** ತಾಲೂಕಿಗೇ ಕಳಶಪ್ರಾಯವಾದ ಇದು ಪಿರಿಯಾಪಟ್ಟಣಕ್ಕೆ ಸುಮಾರು ೧೫ ಕಿ.ಮೀ. ದೂರದಲ್ಲಿರುವ ಸುಪ್ರಸಿದ್ಧ ಪ್ರೇಕ್ಷಣೀಯ ಸ್ಥಳ. ಕೃಷ್ಣರಾಜ

ನಗರ-ಮಡಿಕೇರಿ ಹಾಗೂ ಪಿರಿಯಾಪಟ್ಟಣ-ಅರಕಲಗೊಡು ರಸ್ತೆಗಳು ಸಂಧಿಸುವ ಸ್ಥಳದಲ್ಲಿರುವ ಹೋಬಳಿಕೇಂದ್ರ. ಇಲ್ಲಿಂದ ಈವರೆಗೆ ಸುಮಾರು ೧೫ ರಿಂದ ೧೯ನೇ ಶತಮಾನಕ್ಕೆ ಸೇರಿದ ಮೂವತ್ತಕ್ಕೂ ಹೆಚ್ಚು ಶಾಸನಗಳು ವರದಿಯಾಗಿವೆ. ಬೆಟ್ಟದಪುರವು ಪುರಾಣ ಕಾಲದಿಂದಲೂ ಪ್ರಸಿದ್ಧವಾಗಿದ್ದು ಇಲ್ಲಿರುವ ಬೆಟ್ಟವನ್ನು ವಿಜಯಗಿರಿ, ಶ್ರೀಗಿರಿ, ಗಿರಿಪುರ, ಶೈಲಪುರ, ಇತ್ಯಾದಿ ಹೆಸರುಗಳಿಂದ ಕರೆಯಲಾಗಿದ್ದು, 'ವಿಜಯಗಿರಿ ಮಹಾತ್ಮೆ' ಎಂಬ ಕನ್ನಡ ಷಟ್ಪದೀಕಾವ್ಯದಲ್ಲಿ ಇದರ ಪೌರಾಣಿಕ ಮಹತ್ವವನ್ನು ವರ್ಣಿಸಲಾಗಿದೆ. ಬೆಟ್ಟದಪುರದ ಮೊದಲು ಹೆಸರು 'ಭೈರವಪುರ' ಆಗಿತ್ತೆಂದು ಹಾರನಹಳ್ಳಿ (೧೬೦೦) ಹಾಗೂ ಅರಕಲಗೂಡು ಶಾಸನಗಳಿಂದ ಗೊತ್ತಾಗುತ್ತದೆ. ಇಲ್ಲಿರುವ ಬೆಟ್ಟಕ್ಕೆ ಮಲ್ಲಿನಾಥ ತೀರ್ಥಂಕರಬೆಟ್ಟ ಎಂಬ ಹೆಸರೂ ಇದ್ದು, ಸುಮಾರು ೧೪-೧೫ನೇ ಶತಮಾನದಲ್ಲಿ ಅದು ಮಲ್ಲಿಕಾರ್ಜುನಸ್ವಾಮಿಬೆಟ್ಟವಾಗಿ ಪರಿವರ್ತನೆ ಹೊಂದಿರುವಂತೆ ತೋರುತ್ತದೆ. ಕುಡುಕೂರ ಮಲ್ಲಿಕಾರ್ಜುನನೆಂದೂ ಶಾಸನಗಳಲ್ಲಿ ಉಲ್ಲೇಖಿತಗೊಂಡಿರುವ ಈ ಬೆಟ್ಟದ ಮೇಲಿರುವ ಮಲ್ಲಿಕಾರ್ಜುನ ಗುಡಿ ಭವ್ಯವಾಗಿದೆ. ದೇವಾಲಯದಲ್ಲಿ ಮಲ್ಲಿಕಾರ್ಜುನ ಲಿಂಗ ಹಾಗೂ 'ಭ್ರಮರಾಂಬ' ದೇವಿಯ ವಿಗ್ರಹಗಳಿದ್ದು, ಶಿವಲಿಂಗಕ್ಕೆ ಸಿಡಿಲು ಮಲ್ಲಿಕಾರ್ಜುನ ಲಿಂಗವೆಂದೂ ಕರೆಯುತ್ತಾರೆ. ಇದು ನಾಲ್ಕು ಯುಗಗಳಲ್ಲೂ ಪೂಜಿಸಲ್ಪಟ್ಟಿರುವ ಅಂಶವನ್ನು ೧೭ನೇ ಶತಮಾನದ ಶಾಸನವೊಂದು ವೈಭವೀಕರಿಸಿದೆ. ಹಿಂದೊಮ್ಮೆ ದೇವಾಲಯದಲ್ಲಿ ಪೂಜೆ ನಡೆಯುತ್ತಿರುವಾಗ ಇದ್ದಕ್ಕಿದ್ದಂತೆ ಬಡಿದ ಸಿಡಿಲು ನೇರವಾಗಿ ಗರ್ಭಗುಡಿಯನ್ನು ಪ್ರವೇಶಿಸಿ ಲಿಂಗಕ್ಕೆ ಪ್ರದಕ್ಷಿಣೆ ಹಾಕಿ ಯಾರಿಗೂ ಹಾನಿ ಮಾಡದೆ ಹೊರಟು ಹೋಯಿತಂತೆ. ಅಂದಿನಿಂದ ಅನ್ನದಾನಿ ಮಲ್ಲಿಕಾರ್ಜುನನು ಸಿಡಿಲುಮಲ್ಲಿಕಾರ್ಜುನನಾದನೆಂದು ಹೇಳಲಾಗುತ್ತದೆ. ಊರಿನ ಆಗ್ನೇಯ ದಿಕ್ಕಿನಲ್ಲಿ ಶಂಖಾಕೃತಿಯಲ್ಲಿರುವ ಈ ಬೆಟ್ಟವು ಸುಮಾರು ೬,೬೦೦ ಎಕರೆ ಭೂಮಿಯನ್ನು ಆಕ್ರಮಿಸಿದ್ದು, ಅದರ ಸುತ್ತಳತೆ ಸುಮಾರು ೧೨ ಮೈಲಿಗಳಾಗುತ್ತವೆ. ಈ ಬೆಟ್ಟದ ಎತ್ತರ ಸಮುದ್ರಮಟ್ಟದಿಂದ ೪,೫೦೦ ಅಡಿಗಳು. ಸುಮಾರು ಮೂರುಸಾವಿರ ಮೆಟ್ಟಿಲುಗಳನ್ನು ಹೊಂದಿದ್ದು ಏರಲು ಕಡಿದಾಗಿದೆ. ಈ ಬೆಟ್ಟದ ಮಾರ್ಗದಲ್ಲಿರುವ ಎರಡು ತೋರಣಗಂಬಗಳನ್ನು ಸುಮಾರು ೧೭ನೇ ಶತಮಾನದಲ್ಲಿ ಮುದ್ದುಮಲ್ಲಾಜಮ್ಮ ಹಾಗೂ ಕೆಂಪಾಜಿಯರು ಕಟ್ಟಿಸಿದ್ದಕ್ಕೆ ಶಾಸನಗಳಿವೆ. ಬೆಟ್ಟದ ಮೇಲೆ ನಿಂತಾಗ ಇಡೀ ತಾಲ್ಲೂಕಿನ ಪಕ್ಷಿನೋಟ ಕಾಣಸಿಗುತ್ತದೆ. ದೇವಾಲಯದಲ್ಲಿರುವ ಈ ಲಿಂಗಕ್ಕೆ ಪ್ರತಿನಿತ್ಯವೂ ಪೂಜೆ ಪುರಸ್ಕಾರಗಳು ನಡೆಯುತ್ತದೆ. ದೇವಾಲಯದ ಭಿತ್ತಿ ಹಾಗೂ ಸ್ತಂಭಗಳ ಮೇಲೆ ಕೆತ್ತಿರುವ ಚೋಳ-ದ್ರಾವಿಡ-ವಿಜಯನಗರ ಶಿಲ್ಪಗಳು ವೀಕ್ಷಕರ ಮನಸೆಳೆಯುತ್ತವೆ. ಇದು ಗರ್ಭಗುಡಿಯಿಂದ ಮುಖಮಂಟಪದವರೆಗೆ ಸುಮಾರು ೧೦೦ ಅಡಿ ಉದ್ದವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಬಸವ, ನಟರಾಜ, ಪಾರ್ವತಿ, ಮುಂತಾದ ಸಣ್ಣವಿಗ್ರಹಗಳಿವೆ. ಬಾಗಿಲುವಾಡದ ಮೇಲೆ ಬಸವ ವಿಗ್ರಹವಿದ್ದು ಶುಕನಾಸಿಯಲ್ಲಿ ಯಾವುದೇ ವಿಗ್ರಹ ಕಂಡುಬರುವುದಿಲ್ಲ. ಇವು ಚಂಗಾಳ್ವರ ಕಾಲದ ವಾಸ್ತುಶೈಲಿಯನ್ನು ಹೊಂದಿವೆ. ದೇವಾಲಯದ ಮೇಲ್ಭಾಗದ ನಾಲ್ಕು ಮೂಲೆಯಲ್ಲೂ ನಂದಿ ವಿಗ್ರಹಗಳಿವೆ. ಗರ್ಭಗೃಹದ ಮೇಲ್ಭಾಗದ ವಿಮಾನವು (ಗೋಪುರ) ನಾಲ್ಕು ತಾಳವನ್ನು ಹೊಂದಿದ್ದು

ದ್ರಾವಿಡ ಶೈಲಿಯಲ್ಲಿದೆ. ಗರ್ಭಗುಡಿಯ ಉತ್ತರದ ಗೋಡೆಯಲ್ಲಿ ಹನುಮಂತನ ವಿಗ್ರಹ ಮತ್ತು ಶಿವಲಿಂಗವಿದೆ. ಅಲ್ಲದೆ ದಕ್ಷಿಣ ದಿಕ್ಕಿನಲ್ಲೂ ಸಹ ಹನುಮಂತ ಮತ್ತು ಕಮಲದ ಚಿತ್ರಗಳನ್ನು ಕಾಣಬಹುದು. ಗುಡಿಯೊಳಗಿನ ಕಂಚಿನ ಗಂಟೆಯ ಮೇಲಿರುವ ೧೩೫೦ರ ಶಾಸನ, ಚೆಂಗಾಳ್ವ ಪಿರಿಯರಾಜದೇವನು, ತಂದೆ-ತಾಯಿಗಳ ಕೈಲಾಸಪ್ರಾಪ್ತಿಗೆಂದು ಗಂಟೆಯನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ. ಆದರೆ ಇಲ್ಲಿದ್ದ ಗಂಟೆಯು ಬಹಳ ಹಿಂದೆಯೇ ಕಣ್ಮರೆಯಾಗಿದೆ. ಇಲ್ಲಿ ನಡೆಯುವ ಜಾತ್ರೆ ಬಹಳ ಪ್ರಸಿದ್ಧವಾಗಿದ್ದು, ಜಿಲ್ಲೆಯಲ್ಲೇ ಅತ್ಯಂತ ದೊಡ್ಡದಾದ ಜಾತ್ರೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಆಗ, ಬೆಟ್ಟದಪುರ ಗ್ರಾಮದ ಮಧ್ಯದಲ್ಲಿರುವ ದೇವಾಲಯದಿಂದ ಪಂಚರಥಗಳು ಎಳೆಯಲ್ಪಡುತ್ತವೆ. ಇದೊಂದು ವೀರಶೈವ ಧರ್ಮಪ್ರಸಾರದ ಕೇಂದ್ರವಾಗಿದ್ದು, ಇಲ್ಲಿ ಸಿಕ್ಕಿರುವ ಜೋಡಿ ಲಿಂಗದಲ್ಲಿ ಚನ್ನಬಸವಣ್ಣ ನೀಲಲೋಚನೆಯರು ಜೊತೆಗಿರುವ ಅಪೂರ್ವ ಕೆತ್ತನೆಯಿದೆ. ಖಿಲವಾಗಿದ್ದ ಈ ಲಿಂಗದ ಭಾಗಗಳನ್ನು ಮತ್ತೆ ಸೇರಿಸಿ ಈ ಜೋಡಿಲಿಂಗವನ್ನು ಪರಿಪೂರ್ಣಗೊಳಿಸಿ ಬೆಟ್ಟದಪುರದ ಮಲ್ಲಿಕಾರ್ಜುನ ದೇವಾಲಯದಲ್ಲೀಗ ಪ್ರತಿಷ್ಠಾಪಿಸಲಾಗಿದೆ. ಈ ಬೆಟ್ಟದಲ್ಲಿರುವ ಗವಿಗಳಲ್ಲಿ ಅನೇಕ ಸನ್ಯಾಸಿಗಳು ತಪೋನಿರತರಾಗಿದ್ದು, ಮೋಕ್ಷ ಪಡೆದರೆಂದು ಹೇಳಲಾಗುತ್ತದೆ. ಇತ್ತೀಚಿನವಾದ ಅನೇಕ ಹೊಸದೇವಾಲಯಗಳು ಇಲ್ಲಿವೆ. ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ಬೆಟ್ಟದಲ್ಲಿಯೇ ಕಂಡುಬರುವ ಇತರ ವಿಶೇಷಗಳೆಂದರೆ ಅರ್ಧ ಬೆಟ್ಟ ಹತ್ತಿದಾಗ ಸಿಗುವ ಗಾಳಿ ಮಂಟಪ. ಬೆಟ್ಟದ ಯಾವುದೇ ಭಾಗದಲ್ಲೂ ಬೀಸದಷ್ಟು ಗಾಳಿ ಈ ಮಂಟಪದ ಬಳಿ ಬೀಸುತ್ತದೆ. ಆದ್ದರಿಂದ ಅದು 'ಗಾಳಿಮಂಟಪ' ಎಂದೂ ಪ್ರಸಿದ್ಧ. ಅನಂತರ 'ಸಂಕ್ರಾಂತಿ ಮಾಳ'. ಇದು ಆ ಮಂಟಪದ ಪಕ್ಕದಲ್ಲೇ ಇರುವ ಒಂದು ಮೈದಾನ ಪ್ರದೇಶ. ಹಿಂದೆ ಇಲ್ಲಿಯೇ ಬ್ರಹ್ಮ ರಥೋತ್ಸವ ನಡೆಯುತ್ತಿದ್ದು, ಇಂದು ಕಾರಣಾಂತರಗಳಿಂದ ನಿಂತು ಹೋಗಿದೆ. ಊರಿನ ಸಮೀಪದಲ್ಲಿ ಚಿಕ್ಕವೀರದೇಶಿಕೇಂದ್ರರು ಸ್ಥಾಪಿಸಿದ ವಿರಕ್ತಮಠವಿದ್ದು, ಇಲ್ಲಿ ಅನ್ನದಾಸೋಹ-ಜ್ಞಾನದಾಸೋಹ ಕಾರ್ಯಗಳು ನಿರಂತರವಾಗಿ ನಡೆಯುತ್ತಿವೆ. ಇದನ್ನು ಪ್ರವಾಸೋದ್ಯಮ ಇಲಾಖೆಯವರು ಪ್ರವಾಸಿ ಸ್ಥಳವನ್ನಾಗಿ ಪರಿಗಣಿಸಿ ಉತ್ತೇಜನ ಕೊಡಬೇಕಾಗಿದೆ.

**ಬೆಟ್ಟದತುಂಗ (೨,೩೦೭) :** ಪಿರಿಯಾಪಟ್ಟಣದಿಂದ ಉತ್ತರಕ್ಕಿರುವ ಈ ಊರಲ್ಲಿ ಆದಿ ತೀರ್ಥಂಕರ ಬಸದಿ ಇದೆ. ಪಕ್ಕದಲ್ಲಿಯೇ ವೀರಭದ್ರೇಶ್ವರ ದೇವಾಲಯವಿದೆ. ಪ್ರಾಚೀನ ಶಾಸನಗಳಲ್ಲಿ ತುಂಗ ಎಂದೇ ಉಲ್ಲೇಖಿತಗೊಂಡಿರುವ ಈ ಊರಲ್ಲಿರುವ ಆದಿ ತೀರ್ಥಂಕರ ಬಸದಿಯು ಏಕಕೂಟವಾಗಿದ್ದು, ಸುಮಾರು ೧೨ನೇ ಶತಮಾನಕ್ಕೆ ಸೇರಿದ್ದು ದ್ರಾವಿಡ ಶೈಲಿಯಲ್ಲಿದೆ. ಬಹುಶಃ ಇದು ಚಂಗಾಳ್ವರ ಕಾಲದಾಗಿದ್ದು, ಪೂರ್ವಾಭಿಮುಖವಾಗಿದೆ. ಈ ಬಸದಿಯು ಗರ್ಭಗೃಹ, ಶುಕನಾಸಿ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ವಿಶಾಲವಾದ ನವರಂಗದಲ್ಲಿ ಒಟ್ಟು ೨೦ ಸ್ಥಂಭಗಳಿವೆ. ಬಸದಿಯ ಮುಂದಿರುವ ನಂದಿಗಂಬ ಸು. ೨೦ ಅಡಿ ಎತ್ತರವಿದೆ. ಅದರ ಪೂರ್ವದಿಕ್ಕಿಗೆ ವೀರಭದ್ರೇಶ್ವರ, ಪಶ್ಚಿಮಕ್ಕೆ ಗಣಪತಿ, ದಕ್ಷಿಣಕ್ಕೆ ಆದಿ ತೀರ್ಥಂಕರರ ವಿಗ್ರಹಗಳಿವೆ. ಈ

ಬಸದಿಯನ್ನು ಇತ್ತೀಚೆಗೆ ಊರಿನವರೇ ಜೀರ್ಣೋದ್ಧಾರ ಮಾಡಿದ್ದಾರೆ. ಹಿಂದೆ ಇದೊಂದು 'ಸ್ಥಳ'ದ ಕೇಂದ್ರವಾಗಿದ್ದು, ಒಂಭತ್ತು ಹಳ್ಳಿಗಳನ್ನು ಒಳಗೊಂಡಿತ್ತೆಂದ ೧೫೮೬ರ ಶಾಸನದಿಂದ ವೇದ್ಯವಾಗುತ್ತದೆ.

**ಬೈಲುಕುಪ್ಪೆ (೧,೫೨೫):** ಪಿರಿಯಾಪಟ್ಟಣದಿಂದ ಪಶ್ಚಿಮಕ್ಕೆ ೧೬ ಕಿ.ಮೀ. ದೂರದಲ್ಲಿ ಮೈಸೂರು–ಬಂಟ್ವಾಳ ಹೆದ್ದಾರಿಯಂಚಲ್ಲಿ ಇರುವ ಸಣ್ಣಗ್ರಾಮ. ಹಿಂದೆ, ನಿಬಿಡವಾದ ಅರಣ್ಯದಿಂದ ಕೂಡಿದ್ದ ಈ ಪ್ರದೇಶವು ಇಂದು ಸಕಲ ಸೌಕರ್ಯಗಳಿಂದ ಕೂಡಿರುವ, ಕೃಷಿ–ಕೈಗಾರಿಕೆಗಳಿಂದ ಸಮೃದ್ಧವಾಗಿರುವ, ಟಿಬೇಟಿಯನ್ ನಿರಾಶ್ರಿತರ ಜನ ವಸತಿ ಪ್ರದೇಶವಾಗಿದೆ. ಈಗ ಇದು ಜಿಲ್ಲೆಯ ಪ್ರಮುಖ ಪ್ರೇಕ್ಷಣೀಯ ಸ್ಥಳವಾಗಿದ್ದು, ಬೌದ್ಧರಿಗೆ ಪವಿತ್ರ ಕ್ಷೇತ್ರವಾಗಿ ಪರಿಣಮಿಸಿದೆ. ಈಗ್ಗೆ ನಲವತ್ತೈದು ವರ್ಷಗಳ ಹಿಂದೆ ಟಿಬೆಟ್‌ನಿಂದ ನಿರ್ವಸಿತರಾಗಿ ಆಗಮಿಸಿದ ಆ ಜನಗಳಿಗೆ ಕರ್ನಾಟಕ ಸರ್ಕಾರವು ಆಶ್ರಯ ನೀಡಿದ್ದರಿಂದ ಅವರು ಇಲ್ಲೇ ನೆಲಸಿ ತಮ್ಮ ಸಾಮಾಜಿಕ–ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಂಡಿದ್ದಾರೆ. ಭಾರತದಲ್ಲಿರುವ ಟಿಬೆಟಿಯನ್ ಕ್ಯಾಂಪ್‌ಗಳಲ್ಲೇ ಬೈಲುಕುಪ್ಪೆ ಕ್ಯಾಂಪ್ ಬಹಳ ಚೆನ್ನಾಗಿದೆ ಎಂದು ಅವರ ಧರ್ಮಗುರುಗಳಾದ ದಲಾಯ್‌ಲಾಮಾರವರೇ ಮೆಚ್ಚಿರುವುದು ಇದರ ಹೆಗ್ಗಳಿಕೆಯಾಗಿದೆ. ಈ ಪ್ರದೇಶದಲ್ಲಿ ಸುಮಾರು ಎಂಟು ಶಿಬಿರಗಳಿದ್ದು ಅವುಗಳಲ್ಲಿ ಕೈಲಾಸಪುರವು ಪ್ರಖ್ಯಾತವಾಗಿದೆ. ವೈಭವಪೂರ್ಣವಾದ ಸುವರ್ಣ ಬುದ್ಧನ ಪ್ರತಿಮೆಯನ್ನೊಳಗೊಂಡ ಬೌದ್ಧ ದೇವಾಲಯ ಹಾಗೂ ಬೌದ್ಧಸನ್ಯಾಸಿ ಲಾಮಾಗಳ ವಸತಿ ಸಮುಚ್ಚಯಗಳೂ ಇಲ್ಲಿವೆ. ಒಮ್ಮೆ ಅರಣ್ಯಪ್ರದೇಶವಾಗಿದ್ದ ಈ ಪ್ರದೇಶದಲ್ಲಿ ಈಗ ಹಚ್ಚಹಸಿರಾದ ಮುಸುಕಿನ ಜೋಳದ ಪೈರು ಕಂಡುಬರುತ್ತಿದೆ. ಈ ವಸಾಹತನ್ನು ಪ್ರವೇಶಿಸಿದ ಕೂಡಲೇ ನಮಗೆ ಟಿಬೆಟಿನಲ್ಲಿದ್ದಂತೆ ಭಾಸವಾಗುತ್ತಿದ್ದು, ಅವರ ಧಾರ್ಮಿಕ–ಸಾಂಸ್ಕೃತಿಕ–ವೈಭವ ಗೋಚರವಾಗುತ್ತದೆ. ಇವರಿಗೆ ಟಿಬೆಟ್ ಹಾಗೂ ಭಾರತೀಯ ಭಾಷೆಗಳನ್ನು ಬೋಧಿಸುವ ಶಾಲಾಕಾಲೇಜು ಸಂಸ್ಥೆಗಳು ಇಲ್ಲಿವೆ. ಕರಕುಶಲತೆಗೆ, ಅದರಲ್ಲೂ ರತ್ನಗಂಬಳಿ ಹಾಗೂ ಇತರ ಉಣ್ಣೆವಸ್ತುಗಳನ್ನೂ ತಯಾರಿಸುವ ಕಲೆಯಲ್ಲಿ ಇಲ್ಲಿಯ ಸ್ತ್ರೀಯರು ಪರಿಣತಿಯನ್ನು ಹೊಂದಿದ್ದಾರೆ. ಟಿಬೆಟಿಯನ್ ಕೃಷಿಕರು ತಮ್ಮದೇ ಆದ ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಆರ್ಥಿಕವಾಗಿ ಸಬಲರಾಗಿದ್ದಾರೆ. ಈ ಪ್ರದೇಶವು ಭವ್ಯವಾದ ಕಟ್ಟಡಗಳಿಂದಲೂ, ದೇವಾಲಯ ಸಂಕೀರ್ಣಗಳಿಂದಲೂ, ವಾಣಿಜ್ಯ ಸಮುಚ್ಚಯಗಳಿಂದಲೂ, ವಿದ್ಯಾಸಂಸ್ಥೆಗಳಿಂದಲೂ ಕೂಡಿದ್ದು ಪ್ರವಾಸಿಗಳಿಗೊಂದು ಬೋಧಪ್ರದ ತಾಣವಾಗಿದೆ. ಇಲ್ಲಿಗೆ ಹೋಗಬಯಸುವ ಪ್ರವಾಸಿಗಳಿಗೆ ವಾಹನ ಸೌಕರ್ಯ ಚೆನ್ನಾಗಿದೆ. ಮೈಸೂರು–ಮಡಿಕೇರಿ ನಡುವೆ ಸಂಚರಿಸುವ ಎಲ್ಲಾ ಬಸ್‌ಗಳೂ ಇಲ್ಲಿ ನಿಲ್ಲುತ್ತವೆ. ಸೌಜನ್ಯ ಹಾಗೂ ಸ್ನೇಹಪರರಾದ ಟಿಬೆಟಿಯನ್ನರು ಅತಿಥಿ ಸತ್ಕಾರದಲ್ಲೂ ಸಿದ್ಧಹಸ್ತರಿದ್ದು ಪ್ರವಾಸಿಗರನ್ನು ಆಕರ್ಷಿಸುತ್ತಾರೆ. ಪ್ರವಾಸೋದ್ಯಮ ಇಲಾಖೆಯವರು ಟಿಬೆಟ್‌ನ ಎಲ್ಲಾ ಕ್ಯಾಂಪುಗಳಿಗೂ ಬಸ್ ಮತ್ತು ವಸತಿಗೃಹಗಳನ್ನು ಒದಗಿಸಿದರೆ ಪ್ರವಾಸಿಗರಿಗೆ ಅನುಕೂಲವಾಗುತ್ತದೆಂಬ ಸಾರ್ವಜನಿಕ ಅಭಿಪ್ರಾಯವಿದೆ.

**ಮಾವುಕಲ್ಲಯ್ಯನ ಬೆಟ್ಟ :** ತಾಲೂಕಿನಲ್ಲೇ ದಟ್ಟವಾದ ಅರಣ್ಯಗಳಿಂದ ಕೂಡಿದ, ಸುಮಾರು ೩೦೦೦ ಅಡಿಗಳಷ್ಟು ಎತ್ತರವಿರುವ ಈ ಬೆಟ್ಟಪ್ರದೇಶವು ಕೊಡಗಿನ ಬ್ರಹ್ಮಗಿರಿಯವರೆಗೂ ಹಬ್ಬಿನಿಂತಿದೆ. ಈ ಗಿರಿಕಾನನದಲ್ಲಿ ಆನೆಗಳ ಸಂಚಾರ ಸಾಮಾನ್ಯ; ಇದೊಂದು ನಿತ್ಯ ಹರಿದ್ವರ್ಣ ಕಾಡು ಪ್ರದೇಶವಾಗಿದ್ದು ಸಸ್ಯ ವಿಜ್ಞಾನಿಗಳ, ಅರಣ್ಯಸಂಶೋಧಕರ ಕಾಶಿ ಎನಿಸಿಕೊಂಡಿದೆ. ಇಲ್ಲಿ ಕಾಣಸಿಗುವ ಮರಗಿಡಗಳ ವೈವಿಧ್ಯತೆ ಹೇಳಲಸದಳವಾಗಿದೆ. 'ಸೀತೆತೋಪು' ಎಂದು ಕರೆಯಲ್ಪಡುವ ಕಣಿವೆ ಪ್ರದೇಶದಲ್ಲಿ ಬೆಳೆದ ಮರಗಳು ಯಾವ ಜಾತಿಗೆ ಸೇರಿವೆ ಎಂಬುದು ಅರಣ್ಯ ಇಲಾಖೆಯವರಿಗೂ ಹೇಳಲು ಸಂದಿಗ್ಧವಾಗಿದೆ. ಈ ಬೆಟ್ಟದ ಮೇಲೊಂದು ಶಿವಾಲಯವಿದೆ. ಪಿರಿಯಾಪಟ್ಟಣದಿಂದ ನೈಋತ್ಯಕ್ಕೆ ಹದಿನೈದು ಕಿ.ಮೀ. ದೂರದಲ್ಲಿ ಕೋಗಿಲವಾಡಿ ಎಂಬ ಪುಟ್ಟ ಸುಂದರವಾದ ಗ್ರಾಮದಿಂದ ಚಾರಣ ಮಾಡುತ್ತಾ ಸುಮಾರು ಏಳೆಂಟು ಕಿ.ಮೀ. ಮೇಲೇರಿ ಈ ದೇವಾಲಯವನ್ನು ತಲುಪಬಹುದಾಗಿದೆ. ಅಲ್ಲಿಂದ ಪೂರ್ವಕ್ಕೆ, ೧/೨ ಕಿ.ಮೀ. ತಳದಲ್ಲಿ ಪುಷ್ಕರಣಿಯೊಂದಿದೆ. ಈ ಸ್ಥಳವನ್ನು ಪ್ರವಾಸಿಕೇಂದ್ರವನ್ನಾಗಿ ಮಾಡಲು ಸರ್ಕಾರ ಮುಂದಾಗಬೇಕಿದೆ. ಚಲನಚಿತ್ರ ಹೊರಾಂಗಣ ದೃಶ್ಯದ ಚಿತ್ರೀಕರಣಕ್ಕೆ ಇದೊಂದು ಹೇಳಿಮಾಡಿಸಿದ ಸ್ಥಳವಾಗಿದ್ದು, ಸಮೀಪದ ಸಿದ್ಧೇಶ್ವರ ಬೆಟ್ಟ–ಮುತ್ತೂರು ಅರಣ್ಯ ಪ್ರದೇಶಗಳೂ ಅಷ್ಟೇ ಸುಂದರವಾಗಿವೆ.

**ರಾವಂದೂರು (೨,೫೨೩) :** ಇದು ಪಿರಿಯಾಪಟ್ಟಣದಿಂದ ಉತ್ತರಕ್ಕೆ ೧೯ ಕಿ. ಮೀ. ದೂರದಲ್ಲಿದ್ದು, ಐದು ಪ್ರಾಚೀನ ದೇವಾಲಯಗಳನ್ನು ಹೊಂದಿದೆ. ಇದು ಹೋಬಳಿ ಕೇಂದ್ರವೂ ಹೌದು. ರಾವಂದೂರಿನಿಂದ ಮಾಕೋಡು ಮಾರ್ಗವಾಗಿ ಕೃಷ್ಣರಾಜನಗರಕ್ಕೆ ಕುಡುಕೂರು ಬೆಟ್ಟದತುಂಗ ಮಾರ್ಗವಾಗಿ ಬೆಟ್ಟದಪುರಕ್ಕೆ, ಕಿತ್ತೂರು ಕಡೆಯಿಂದ ಹನಸೋಗೆ ಕೆರಳಾಪುರಕ್ಕೆ ಹಾಗೂ ಚುಂಚನಕಟ್ಟೆ ಮಾರ್ಗವಾಗಿ ಕೃಷ್ಣರಾಜನಗರಕ್ಕೆ ಸಾರಿಗೆ ಸಂಪರ್ಕವಿದೆ. ಇಲ್ಲಿರುವ ಸುಮತಿ ತೀರ್ಥಂಕರ ಬಸದಿಯ ಕ್ರಿ.ಶ. ೧೩೦೬ರ ಶಾಸನದಲ್ಲಿ ಶ್ರುತಕೀರ್ತಿದೇವ ಎಂಬ ಜೈನ ಮುನಿಯು ಮುಕ್ತಿ ವಧೂವಲ್ಲಭನಾದುದರ ನೆನಪಿಗಾಗಿ ಸುಮತಿತೀರ್ಥಂಕರನ ಚೈತ್ಯಾಲಯದ ಜೀರ್ಣೋದ್ಧಾರವನ್ನು ಆದಿದೇವ ಮುನಿಗಳೂ ಅವರ ಶಿಷ್ಯರೂ ಹಾಗೂ ಸಮಸ್ತ ಭವ್ಯಜನಗಳು ಮಾಡಿಸಿದ ವಿಷಯ ಹೇಳಿದೆ. ಈ ಶಾಸನದಿಂದ ರಾವಂದೂರು ಸುಮಾರು ೭೦೦ ವರ್ಷಗಳಿಗಿಂತಲೂ ಪ್ರಾಚೀನವಾದುದೆಂದು ವಿದಿತವಾಗುತ್ತದೆ. ಈ ಊರಿನಲ್ಲಿ ಒಟ್ಟು ಆರು ಶಾಸನಗಳು ಲಭಿಸಿದ್ದು, ಶ್ರುತಕೀರ್ತಿದೇವರ ಮರಣವನ್ನು ತಿಳಿಸುವ ಶಾಸನವೇ ಅತ್ಯಂತ ಪ್ರಾಚೀನದ್ದಾಗಿದೆ. ದ್ರಾವಿಡ ಶೈಲಿಯ ಅರ್ಜುನೇಶ್ವರ ದೇವಾಲಯವು ಗ್ರಾಮದ ಉತ್ತರ ದಿಕ್ಕಿನಲ್ಲಿ ದಕ್ಷಿಣಾಭಿಮುಖವಾಗಿದೆ. ಇದು ಚೋಳರ ಕಾಲದ ಏಕಕೂಟ ದೇವಾಲಯುವಾಗಿದೆ. ರಾವಂದೂರಿನ ಉತ್ತರದಿಕ್ಕಿನಲ್ಲಿರುವ ಬಸದಿ ಗಂಗರ ಕಾಲದ ಕೊಡುಗೆ. ಈ ಬಸದಿಯು ಪೂರ್ವಾಭಿಮುಖನಾಗಿದ್ದು ದ್ರಾವಿಡ ಶೈಲಿಯಲ್ಲಿರುವ ಏಕಕೂಟವಾಗಿದೆ. ಗರ್ಭಗೃಹದ ಹೊರಭಾಗದಲ್ಲಿ ಚೋಳ ವಾಸ್ತುಶೈಲಿಯನ್ನು ಹೋಲುವಂತಹ ಅರೆಕಂಬ ಮತ್ತು ಮಂಟಪ ಮಾದರಿಯ ಕೋಷ್ಟಗಳಿವೆ. ಈ ದೇವಾಲಯದ ಮೇಲುಭಾಗ ಮುಳ್ಳಿನ ಗಿಡಗಳಿಂದ ಮುಚ್ಚಿಹೋಗಿದೆ. ರಾವಂದೂರಿನ ಉತ್ತರ ದಿಕ್ಕಿನಲ್ಲಿರುವ ಶಿವದೇವಾಲಯವು

ಪೂರ್ವಾಭಿಮುಖವಾಗಿದ್ದು ದ್ರಾವಿಡ ಶೈಲಿಯನ್ನು ಹೊಂದಿದೆ. ದೇವಾಲಯದ ಮೇಲ್ಭಾಗದಲ್ಲಿರುವ ಮೂರು ಕೋಷ್ಟಗಳಲ್ಲಿ ಶಿವನ ವಿಗ್ರಹಗಳಿವೆ. ದೇವಾಲಯದ ನಾಲ್ಕು ಮೂಲೆಯಲ್ಲೂ ಬಸವನ ವಿಗ್ರಹವಿದ್ದು ಗರ್ಭಗೃಹದ ಅಂಕಣದ ಮೇಲ್ಭಾಗದಲ್ಲಿ ಉಪಾನದಿಂದ ವಿಮಾನದವರೆಗೆ ದ್ರಾವಿಡ ಶೈಲಿಯ ಗೋಪುರವನ್ನು ಕಾಣುತ್ತೇವೆ. ಇದು ಸುಮಾರು ೧೫ ಅಡಿ ಎತ್ತರವಿದ್ದು ಚಂಗಾಳ್ವರ ಕಾಲದ ವಾಸ್ತುಶೈಲಿಯನ್ನು ಹೊಂದಿದೆ. ರಾವಂದೂರು ಜೈನ, ಶೈವ, ವೀರಶೈವ, ವೈಷ್ಣವ, ಶ್ರೀವೈಷ್ಣವ ಹಾಗೂ ಜನಪದ ಧರ್ಮಗಳ ಪ್ರಸಾರ ಕೇಂದ್ರವಾಗಿದ್ದಂತೆ ತೋರುತ್ತದೆ. ಇಲ್ಲಿ ಸುಮತಿತೀರ್ಥಂಕರ ಬಸದಿ, ಈಶ್ವರ ದೇವಾಲಯ ಸಿಡ್ಲು ಮಲ್ಲಿಕಾರ್ಜುನ ದೇವಾಲಯ, ವೀರಭದ್ರೇಶ್ವರ, ಮಲೆಮಾದೇಶ್ವರ, ಅರ್ಜುನೇಶ್ವರ, ಲಕ್ಷ್ಮೀನಾರಾಯಣ, ಗಣೇಶ, ರೇಣುಕಾ, ಸಂತೆ ಬಸಪ್ಪಗಾಳಿ ಬಸಪ್ಪ, ದೊಡ್ಡಮ್ಮ, ಚಿಕ್ಕಮ್ಮ ಮತ್ತು ಮಾರಮ್ಮನ ದೇಗುಲಗಳಿದ್ದು, ದೇವಾಲಯಗಳ ಊರು ಎನಿಸಿಕೊಂಡಿದೆ.

**ಸಂಗರಶೆಟ್ಟಿಹಳ್ಳಿ (೧,೪೩೮):** ಪಿರಿಯಾಪಟ್ಟಣದಿಂದ ಉತ್ತರಕ್ಕೆ ಇರುವ ಈ ಊರಿನ ದಕ್ಷಿಣ ಭಾಗದಲ್ಲಿ ಈಶ್ವರ ದೇವಾಲಯವಿದೆ. ಇದನ್ನು ಕೊಲ್ಲಿ ಮಲ್ಲಪ್ಪನ ದೇವಾಲಯ ಎಂದೂ ಕರೆಯುತ್ತಾರೆ. ಈ ದೇವಾಲಯವು ದ್ರಾವಿಡ ಶೈಲಿಯಲ್ಲಿದೆ. ಇಲ್ಲಿಯ ಹೊಲವೊಂದರಲ್ಲಿರುವ ೧೯೦೭ರ ಶಾಸನದಲ್ಲಿ ಊರ ಹೆಸರು ಚೆಂಗಾಲ್ವಸೆಟ್ಟಿಹಳ್ಳಿ ಎಂದು ದಾಖಲಾಗಿದ್ದು, ಗಣಪತಿ ಪ್ರತಿಷ್ಠೆಯನ್ನು ತಿಳಿಸುತ್ತದೆ. ಊರಿನ ಹೊರವಲಯದ ಬಂಡೆ ಮೇಲೆ ಕೆತ್ತಿರುವ ಗಣಪತಿಯ ವಿಗ್ರಹವು ಶಾಸನೋಕ್ತ ಶಿಲ್ಪವಾಗಿದ್ದು, ಅಪೂರ್ವವಾಗಿದೆ.

**ಸೂಳೆಕೋಟೆ (೧೬೫೮):** ಇದು ಪಿರಿಯಾಪಟ್ಟಣದಿಂದ ವಾಯವ್ಯ ದಿಕ್ಕಿನಲ್ಲಿರುವ ತಾಲೂಕಿನ ಸುಪ್ರಸಿದ್ಧ ತೀರ್ಥಕ್ಷೇತ್ರಗಳಲ್ಲೊಂದು. ಮಾರುತಿ ಕ್ಷೇತ್ರವೆಂದೂ ಪ್ರಖ್ಯಾತವಾಗಿರುವ ಇದು ಬಹುಶಃ ವಿಜಯನಗರದ ಅರಸರು ಪಿರಿಯಾಪಟ್ಟಣದ ಚಂಗಾಳ್ವರನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡಾಗ ನಿರ್ಮಿಸಿದ ಶ್ರೀವೈಷ್ಣವ ಕ್ಷೇತ್ರವೆಂದು ಕಾಣುತ್ತದೆ. ಗರ್ಭಗೃಹ, ನವರಂಗ ಮತ್ತು ಪ್ರಾಕಾರಗಳನ್ನು ಹೊಂದಿರುವ ಈ ಗುಡಿಯ ಮುಖ್ಯದ್ವಾರದ ಮೇಲೆ ಗೋಪುರವಿದೆ. ಒಟ್ಟು ೨೪ ಕಂಬಗಳನ್ನು ಈ ದೇವಾಲಯದಲ್ಲಿ ಕಾಣಬಹುದಾಗಿದ್ದು, ನವರಂಗದ ಕಂಬಗಳ ಮೇಲೆ ಗಣಪ, ನಾರಾಯಣ, ಕೃಷ್ಣ–ರುಕ್ಮಿಣಿ, ಶಿವಲಿಂಗ, ತ್ರಿಶೂಲ, ನವಿಲು, ಮಂಗ, ಗರುಡ, ಬಸವ, ಮೊಸಳೆ, ವ್ಯಾಳ, ರಾವಣ ಶಿಲ್ಪಗಳ ಜೊತೆಗೆ ರಾಮಾಯಣ, ಮಹಾಭಾರತಕ್ಕೆ ಸಂಬಂಧಿಸಿದ ಉಬ್ಬು ಶಿಲ್ಪಗಳಿವೆ. ಪ್ರವೇಶದ್ವಾರದ ಮೇಲೆ ಮೂರು ದೇವಕೋಷ್ಟಗಳಿದ್ದು ಮಧ್ಯದಲ್ಲಿ ರಾಮಸೀತೆ, ಲಕ್ಷ್ಮಣ ಹಾಗೂ ಹನುಮಂತರ ಮೂರ್ತಿಗಳಿವೆ. ಪೂರ್ವದಿಕ್ಕಿನ ಕೋಷ್ಟದಲ್ಲಿ ಕೃಷ್ಣ, ನಾರದ, ರುಕ್ಮಿಣಿ, ಅರ್ಜುನ, ಪಶ್ಚಿಮದಲ್ಲಿ ರಾಮಲಕ್ಷ್ಮಣ ಸೀತೆ ಚಿತ್ರಗಳಿವೆ. ಗರ್ಭಗೃಹಕ್ಕೆ ದ್ರಾವಿಡ ಶೈಲಿಯ ವಿಮಾನ ಗೋಪುರವಿದ್ದು, ಮುಂದೆ ಇತ್ತೀಚಿನ ಗರುಡಗಂಬವಿದೆ. ಇತ್ತೀಚೆಗೆ ಊರಿನ ಭಕ್ತಾದಿಗಳು ದೇವಸ್ಥಾನವನ್ನು ನವೀಕರಿಸಿದ್ದಾರೆ.

**ಹಿಟ್ನೆ ಹೆಬ್ಬಾಗಿಲು (೨,೯೬೫):** ಇದು ಪಿರಿಯಾಪಟ್ಟಣದಿಂದ ಉತ್ತರಕ್ಕೆ ಆರು ಕಿ. ಮೀ. ದೂರದಲ್ಲಿದೆ. ಇಲ್ಲಿಂದ ವರದಿಯಾಗಿರುವ ಶಿವಮೃಗೇಶವರ್ಮ ಕದಂಬನ ತಾಮ್ರ ಶಾಸನದಿಂದಾಗಿ ಇದು ಮಹತ್ವ ಪಡೆದಿದೆ. ಅದರಲ್ಲಿ ಉಕ್ತವಾಗಿರುವ ಕಿರುನಿರೆಲ್ಲೆ ಗ್ರಾಮವೇ ಇಂದಿನ ಕಿರ್ನೆಲ್ಲಿಯಾಗಿದೆ. ಇಲ್ಲಿಯ ಚೆನ್ನಕೇಶವ ದೇವಾಲಯವು ಊರಿನ ಮಧ್ಯೆ ಉಪ್ಪಾರ ಬೀದಿಯಲ್ಲಿ ಪೂರ್ವಾಭಿಮುಖವಾಗಿ ನಿಂತಿದೆ. ಈ ದೇವಾಲಯವು ದ್ರಾವಿಡ ಶೈಲಿಯಲ್ಲಿರುವ ಏಕಕೂಟವಾಗಿದ್ದು ಗರ್ಭಗುಡಿ, ಶುಕನಾಸಿ ಮತ್ತು ನವರಂಗಗಳನ್ನು ಹೊಂದಿದೆ. ಈ ದೇವಾಲಯವು ೨೦ ಅಡಿ ಎತ್ತರದ ಸಣ್ಣಗುಡ್ಡದ ಮೇಲಿದ್ದು ೧೯೬೯ರಲ್ಲಿ ಅದರ ಕೆಲವು ಭಾಗವನ್ನು ಜೀರ್ಣೋದ್ಧಾರ ಮಾಡಲಾಗಿದೆ.

**ಹಿರೇಮಳಲಿ (೫೧):** ಪಿರಿಯಾಪಟ್ಟಣಕ್ಕೆ ೨೦ ಕಿ.ಮೀ. ದೂರದಲ್ಲಿರುವ ಇಲ್ಲಿಂದ ಈವರೆಗೆ ಎರಡು ಶಾಸನಗಳು ವರದಿಯಾಗಿವೆ. ಗಂಗರಿಗೆ ಸೇರಿದ ೯೭೭ರ ಶಾಸನ ಕುಪ್ಪೆನಾಡ ಮಣಲೂರನ್ನು ಅಗ್ರಹಾರವನ್ನಾಗಿಸಿ, ದಾನ ಬಿಟ್ಟಿದ್ದನ್ನು ತಿಳಿಸಿದರೆ, ೧೫೦೪ರ ಸಂಸ್ಕೃತ ಶಾಸನ ಚೆಂಗಾಳ್ವರ ವಂಶಾವಳಿಯನ್ನು ನೀಡುತ್ತಾ ಊರ ಹೆಸರನ್ನು ಹಿರಿಯಮಳಲಿ ಎಂದೇ ದಾಖಲಿಸಿದೆ. ಶಾಸನೋಕ್ತ ಮಣಲೂರು ಅಗ್ರಹಾರವೇ ಇಂದಿನ ಹಿರೇಮಳಲಿಯಾಗಿದ್ದು, ಗಂಗರ ಕಾಲದ ಪ್ರಾಚ್ಯಾವಶೇಷಗಳಿರುವ ಸಾಧ್ಯತೆ ಇದ್ದು ಪರಿವೀಕ್ಷಿಸುವ ಅಗತ್ಯವಿದೆ.

**ಹೊನ್ನೂರು (೪೬೯):** ಪಿರಿಯಾಪಟ್ಟಣದಿಂದ ಪಶ್ಚಿಮಕ್ಕೆ ಸುಮಾರು ೧೬ ಕಿ.ಮೀ. ದೂರದಲ್ಲಿ ಮೈಸೂರು–ಬಂಟ್ವಾಳ ಹೆದ್ದಾರಿಯಲ್ಲಿ ಬೈಲುಕುಪ್ಪೆ ಗ್ರಾಮದ ಉತ್ತರಕ್ಕೆ ಸುಮಾರು ನಾಲ್ಕು ಕಿ.ಮೀ. ಒಳಕ್ಕಾದಂತಿದೆ. ಗ್ರಾಮದ ಬಳಿ ಇರುವ ಹೊನ್ನೂರಯ್ಯನ ಗುಡ್ಡದ ಸನಿಹದಲ್ಲೇ ಕಾವೇರಿ ನದಿಯು ಮಾಲೆಯಂತೆ ಹರಿದಿದೆ. ಒಂದು ಕಡೆ ಪಶ್ಚಿಮ ಘಟ್ಟಗಳ ಸರಮಾಲೆ, ಇನ್ನೊಂದು ಕಡೆ ಎತ್ತರವಾಗಿ ಕಡೆಗೋಲಿನಂತೆ ಕಾಣುತ್ತಿರುವ ಬೆಟ್ಟದಪುರದ ಸಿಡಿಲುಮಲ್ಲಿಕಾರ್ಜುನ ಬೆಟ್ಟ, ಅನತಿದೂರದಲ್ಲಿ ಸರಮಾಲೆಯಂತೆ ಕಾಣುತ್ತಿರುವ ಗುಡ್ಡಗಳ ಸಾಲು ನೋಟಕರನ್ನು ಮಂತ್ರಮುಗ್ಧರನ್ನಾಗಿಸುತ್ತವೆ. ಬೆಟ್ಟವು ಸುಮಾರು ಮುನ್ನೂರು ಮೆಟ್ಟಿಲುಗಳನ್ನು ಹೊಂದಿದ್ದು ಮೇಲ್ಭಾಗದಲ್ಲಿ ದೇವಾಲಯ ಹಾಗೂ ಸಣ್ಣ ಪುಷ್ಕರಣಿಗಳಿವೆ. ದೇವಾಲಯವು ಎರಡು ಗರ್ಭಗೃಹಗಳನ್ನು ಹೊಂದಿದ್ದು ಉತ್ತರ ಗರ್ಭಗೃಹದಲ್ಲಿರುವ ರಂಗನಾಥನ ವಿಗ್ರಹವು ಬಹು ರಮಣೀಯವಾಗಿದೆ. ಪೂರ್ವದ ಇನ್ನೊಂದು ಗರ್ಭಗೃಹದಲ್ಲಿ ಲಕ್ಷ್ಮೀದೇವಿಯ ಪ್ರತಿಮೆ ಇದೆ. ಸನಿಹದಲ್ಲೇ ಅವನ್ನು ಪ್ರತಿಷ್ಠಾಪಿಸಿದ ಭಕ್ತದಂಪತಿ ವಿಗ್ರಹಗಳಿವೆ. ವಿಜಯನಗರದ ಉಚ್ಛ್ರಾಯ ಕಾಲದಲ್ಲಿ ಸ್ಥಾಪಿತವಾದ ಈ ದೇವಾಲಯವನ್ನು ಪುರಂದರದಾಸರು ಸಂದರ್ಶಿಸಿ ಮೂರ್ತಿ ಎದುರು ನಿಂತು, 'ಕಂಡುಕಂಡು ನೀ ಎನ್ನ ಕೈ ಬಿಡುವುದೇ ಕೃಷ್ಣ ......' 'ಹೊನ್ನೂರ ಪುರವಾಸ ಶ್ರೀಪುರಂದರ ವಿಠಲ' ಎಂದು ಭಕ್ತಿಪರವಶರಾಗಿ ಹಾಡಿ ಕೊಂಡಾಡಿದ್ದಾರೆ. ಈ ಬೆಟ್ಟದ ಬುಡದಲ್ಲಿ ಶ್ರೀ ವ್ಯಾಸರಾಯರಿಂದ ಪ್ರತಿಷ್ಠಿತವಾದ ಆಂಜನೇಯಗುಡಿ ಇದೆ. ಬಳಿಯಲ್ಲೇ, ಹಿಂದೊಮ್ಮೆ ಪ್ರಖ್ಯಾತವಾಗಿದ್ದು ವೈಭವದಿಂದ ಕೂಡಿದ್ದ ಕಾಪಾಲಿಕರ ಇಷ್ಟದೈವವಾದ ಭೈರವೇಶ್ವರ ದೇವಾಲಯವು ಶಿಥಿಲಾವಸ್ಥೆಯಲ್ಲಿದೆ.

ಇದನ್ನು ಪ್ರವಾಸೀ ಕೇಂದ್ರವನ್ನಾಗಿ ಮಾಡಲು ಸಾಕಷ್ಟು ಅವಕಾಶಗಳಿವೆ. **ಚಿಕ್ಕ ಹೊನ್ನೂರು:** ಪಿರಿಯಾಪಟ್ಟಣದಿಂದ ಪಶ್ಚಿಮಕ್ಕೆ ಸುಮಾರು ೨೪ ಕಿ. ಮೀ. ದೂರದ ಹೊನ್ನೂರಯ್ಯನ ಬೆಟ್ಟದ ಮೇಲೆ "ನಾರಾಯಣಸ್ವಾಮಿಯ ದೇವಾಲಯವಿದೆ". ಇದು ಸುಮಾರು ೧೫೦೦ ಅಡಿ ಎತ್ತರದ ಬೆಟ್ಟದ ಮೇಲಿದೆ. ಇದು ದಕ್ಷಿಣಾಭಿಮುಖವಾಗಿದ್ದು ದ್ರಾವಿಡ ಶೈಲಿಯನ್ನು ಹೊಂದಿರುವ ಏಕಕೂಟ ದೇವಾಲಯ. ಗರ್ಭಗೃಹದಲ್ಲಿ ಪೀಠದ ಮೇಲೆ ಆರು ಅಡಿ ಎತ್ತರವಿರುವ ನಾರಾಯಣ ವಿಗ್ರಹವಿದೆ. ಮೇಲ್ಭಾಗದಲ್ಲಿ ಭುವನೇಶ್ವರಿಯಿದ್ದು, ಶುಕನಾಸಿಯು ಗರ್ಭಗುಡಿಯಂತೆ ವಿಸ್ತಾರ ಹೊಂದಿದ್ದು ಯಾವುದೇ ವಿಗ್ರಹಗಳಿಲ್ಲ. ನವರಂಗದ ಎರಡು ಪಾರ್ಶ್ವಗೋಡೆಗಳಲ್ಲಿ ಆಂಜನೇಯ ವಿಗ್ರಹವಿದೆ. ಈ ದೇವಾಲಯವು ವಿಜಯನಗರ ಅರಸರ ಕಾಲದಾಗಿದ್ದು, ೧೯೯೯ರಲ್ಲಿ ಅರಣ್ಯ ಇಲಾಖೆಯವರು ಇದನ್ನು ಜೀರ್ಣೋದ್ಧಾರ ಮಾಡಿಸಿದ್ದಾರೆ.

* * * *